
ಪ್ರಬಂಧ



ಮಿತ್ರಾ ವೆಂಕಟ್ರಾಜ
ಕಲೆ: ಗುಜ್ಜಾರ್

# ಕೊಲ್ಕತ್ತದ ಕಾಲೇಜು ರಸ್ತೆ



ಬಂಗಾಲಿಗಳ ಪುಸ್ತಕ ಪ್ರೇಮ ವಿಪರೀತ. ಆಧುನಿಕ ಸಾಹಿತ್ಯದ ಆರಂಭದ ಕಾಲದಲ್ಲಿ ಬಂಗಾಳವು ಶ್ರೀಮಂತ ಸಾಹಿತ್ಯಿಕ ಪರಂಪರೆಯನ್ನು ಹುಟ್ಟುಹಾಕಿತ್ತು. ಮೊದಲು ಈಸ್ಟ್ ಇಂಡಿಯಾ ಕಂಪೆನಿಯವರು ಅಲ್ಲಿ ನೆಲೆಸಿದರು. 1757ರ ನಂತರ ಬ್ರಿಟಿಷ್ ಸರಕಾರದ ಪ್ರತಿನಿಧಿಗಳೇ ಬಂಗಾಲದಲ್ಲಿ ಬೀಡು ಬಿಟ್ಟ ಮೇಲೆ, (ಭಾರತದ ಕೇಂದ್ರವು ದಿಲ್ಲಿಯಿಂದ ಕೊಲ್ಕತ್ತಕ್ಕೆ ಬದಲಾಗಿ) ಆಧುನಿಕ ಬಂಗಾಲಿ ಸಾಹಿತ್ಯವು ಇನ್ನಿಲ್ಲದಂತೆ ಬೆಳೆದು, ಅದು ದೇಶದಲ್ಲೇ ಮುಂಚೂಣಿಯಲ್ಲಿ ನಿಂತಿತು. ಹೈಸ್ಕೂಲಿನಲ್ಲಿರುವಾಗ ನಮಗೆ ಬಂಗಾಲಿ ಕಾದಂಬರಿಗಳದೇ ಹುಚ್ಚು.

ಕೊಲ್ಕತ್ತದ ಮಧ್ಯದಲ್ಲಿರುವ ಕಾಲೇಜು ರಸ್ತೆಯು ಪ್ರವಾಸಗಳಲ್ಲಿ ಸಂದರ್ಶಿಸಿದ ತಾಣಗಳಲ್ಲೆಲ್ಲ ನನ್ನ ಅತ್ಯಂತ ಇಷ್ಟದ ಸ್ಥಳಗಳಲ್ಲಿ ಒಂದು. ಬೌಬಝಾರಿನ ಗಣೇಶ್ಚಂದ್ರ ಅವೆನ್ಯೂ ಕ್ರಾಸಿಂಗ್‌ನಿಂದ ಹಿಡಿದು ಬಿದಾನ್ಸರಾನಿಯ ಮಹಾತ್ಮ ಗಾಂಧಿ ರಸ್ತೆ ಕ್ರಾಸಿಂಗ್‌ನವರೆಗಿನ ಒಂದೂವರೆ ಕಿಲೋ ಮೀಟರ್ ಉದ್ದದ ಈ ರಸ್ತೆಯ ಇಕ್ಕೆಲಗಳಲ್ಲೂ ಸಣ್ಣ, ದೊಡ್ಡ ಪುಸ್ತಕದಂಗಡಿಗಳದೇ ಸಾಲು ಸಾಲು. ಬಂಗಾಲಿಗಳು ಈ ಜಾಗವನ್ನು 'ಬೌ ಪಾರಾ' ಎಂದೂ ಕರೆಯುತ್ತಾರೆ. ಅಂದರೆ ಪುಸ್ತಕಗಳ ವಠಾರ ಅಥವಾ ಪುಸ್ತಕಗಳ ಪಟ್ಟಣ.

ಈ ಪುಸ್ತಕ ಪಟ್ಟಣದಲ್ಲಿ ಒಂದು ರಸ್ತೆಯ ಇನ್ನೂರು ವರ್ಷಗಳ ಪಯಣದ ಚರಿತ್ರೆಯು ಅಡಗಿದೆ. ಕಾಲೇಜು ರಸ್ತೆಯೆಂದರೆ, ಅದೊಂದು ಪರಂಪರೆ ಎನ್ನುವುದನ್ನು ಅದರೆದುರು ನಿಂತಾಗಲೇ ಅನುಭವಿಸುವಂತಾಗುತ್ತದೆ. 1817ರಲ್ಲಿ ಹಿಂದೂ ಕಾಲೇಜಿನ (ಈಗಿನ ಪ್ರೆಸಿಡೆನ್ಸಿ ಕಾಲೇಜು) ಆರಂಭದೊಂದಿಗೆ ಈ ರಸ್ತೆಯ ರಚನೆಯಾಯಿತು ಎನ್ನುತ್ತಾರೆ. ಕಾಲಕ್ರಮೇಣ ಅದೇ ರಸ್ತೆಯಲ್ಲಿ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಸಂಸ್ಕೃತ ಕಾಲೇಜು ಮತ್ತು ವಿಶ್ವವಿದ್ಯಾಲಯ, ಸಿಟಿ ಕಾಲೇಜ್ ಆಫ್ ಕಾಮರ್ಸ್ ಮೊದಲಾದ ಬೇರೆ ಕಾಲೇಜುಗಳೂ ಸ್ಥಾಪಿತಗೊಂಡವು. ಹೀಗೇ, ಕೊಲ್ಕತ್ತದ ಹೃದಯ ಭಾಗದಲ್ಲಿರುವ ಕಾಲೇಜು ರಸ್ತೆಯೆಂದರೆ, ಪುಸ್ತಕ ಮತ್ತು ಓದುಗರ ಒಡನಾಟದ ಉಸಿರಾಡುವ, ಜೀವಂತ ಪರಿಸರ.

ಅಮೆರಿಕದ ನನ್ನ ಗೆಳತಿ ಲೇಖಕಿ ಜೆರಾಲ್ಡೀನ್ ಫೋರ್ಬ್ಸ್ ಕಳೆದ ಕೆಲವು ವರ್ಷಗಳಿಂದ ಪ್ರತೀ ಚಳಿಗಾಲವನ್ನೂ ಸಂದರ್ಶಕ ಪ್ರಾಧ್ಯಾಪಿಕೆಯಾಗಿ ಕೊಲ್ಕತ್ತದಲ್ಲಿ ಕಳೆಯುತ್ತಾಳೆ. ಅವಳು ಹೇಳುವಂತೆ ಕಾಲೇಜು ರಸ್ತೆಯೆಂದರೆ ಕೇವಲ ಪ್ರವಾಸೀ ಸ್ಥಳವಲ್ಲ, ಅದೊಂದು ಅನನ್ಯ ಅನುಭವ!

ಇವಲ್ಲದೆ ಇದು ಬೌದ್ಧಿಕ ಚಟುವಟಿಕೆಗಳ ಕೇಂದ್ರವೂ ಹೌದು; ನೇತಾಜಿ ಸುಭಾಷ್ಚಂದ್ರ ಬೋಸರ ರಾಜಕೀಯ ಸಭೆಯಿಂದ ಹಿಡಿದು ಅನೇಕ ಚಾರಿತ್ರಿಕ ಸಭೆಗಳಿಗೆ ತಾಣವಾಗಿತ್ತಲ್ಲದೆ, ಬಂಗಾಲದ ನಕ್ಸಲೀಯ ಚಳವಳಿಯು ಆರಂಭವಾದುದೂ ಇಲ್ಲಿಯೇ. ದಶಕಗಳಿಂದ ಬುದ್ಧಿಜೀವಿಗಳನ್ನು,